
## ಮೇತಿ ಕಾ ಲಡ್ಡು!



ಪ್ರತೀ ಚಳಿಗಾಲದಲ್ಲೂ ನನಗೆ ಮೊಣಕಾಲು ನೋವು ಕಾಣಿಸಿಕೊಳ್ಳುತ್ತದೆ. ಈ ಬಾರಿಯೂ ಹಾಗಾದಾಗ, ಸಹೋದ್ಯೋಗಿಯೊಬ್ಬ ದಿನಕ್ಕೊಂದು ಮೆಂತ್ಯೆ ಲಡ್ಡು ಸೇವಿಸಲು ಸಲಹೆಯಿತ್ತ. ಅಂದೇ ಸಂಜೆ ಕಚೇರಿಯಿಂದ ಮನೆಗೆ ಹಿಂತಿರುಗುವ ದಾರಿಯಲ್ಲಿ ಸ್ವೀಟ್ ಮಾರ್ಟ್‌ಗೆ ಹೋಗಿ ಹಿಂದಿಯಲ್ಲಿ, 'ಆದಾ ಕಿಲೋ ಮೇತಿ ಕಾ ಲಡ್ಡು ದೇನಾ' ಎಂದೆ. ಅಂಗಡಿಯಾತ ಇನ್ನೊಮ್ಮೆ ಏನು ಬೇಕೆಂದು ಕೇಳಿದ. 'ಮೇತಿ ಕಾ ಲಡ್ಡು' ಅಂದೆ. ಒಳ ಹೋಗಿ ಪ್ಯಾಕ್ ಮಾಡಿ ತಂದಿತ್ತ. ನಾನು ದುಡ್ಡು ಕೊಟ್ಟು ಮನೆಗೆ ಬಂದೆ. ಮುಂಜಾನೆ ಒಲ್ಲದ ಮನಸ್ಸಿನಿಂದ ಈ ಕಹಿ ಲಡ್ಡು ತಿನ್ನಲು ಪ್ಯಾಕೆಟ್ ತೆರೆದು ನೋಡಿದರೆ ಒಳಗೆ ಕಿತ್ತಳೆ ಬಣ್ಣದ ಮೋತಿ ಚೂರಿನ ಲಡ್ಡುಗಳು ಕಣ್ಸೆಳೆಯುತ್ತಿದ್ದವು! ನಾನು 'ಮೇತಿ ಕಾ ಲಡ್ಡು' ಅಂದಿದ್ದು ಆತನಿಗೆ, 'ಮೋತಿ ಕಾ ಲಡ್ಡು' ಎಂದು ಕೇಳಿಸಿರಬೇಕು. ಅಂತೂ ಇಂತೂ ಕಹಿಯ ಬದಲು ಸಿಹಿ ಲಡ್ಡು ಬಾಯಿಗೆ ಬಿತ್ತು!

**ರಮಣ್ ಶೆಟ್ಟಿ ರೆಂಜಾಳ್**

---

## ಕಣ್ಣು ಮುಚ್ಚು

ನಮ್ಮ ಪರಿಚಯದವರಲ್ಲಿ ನಡೆದ ಘಟನೆ ಇದು. ಮಗುವೊಂದು ತನ್ನ ತಾತನ ಹತ್ತಿರ ಬಂದು, 'ತಾತ, ನೀನು ಒಂದೇ ಒಂದು ಸಾರಿ ಕಣ್ಣು ಮುಚ್ಚು' ಎಂದಿತು. ಮಗು ತನಗಾಗಿ ಏನೊ ತಂದಿರಬೇಕು ಎಂದುಕೊಂಡ ತಾತ ಕಣ್ಣು ಮುಚ್ಚಿದರು. ಸ್ವಲ್ಪ ಹೊತ್ತಿನ ನಂತರ, 'ಈಗ ಕಣ್ಣು ಬಿಡು' ಎಂದಿತು. ತಾತ ಕಣ್ಣು ಬಿಟ್ಟರು. ಒಡನೆಯೇ ಒಳಗೆ ಓಡಿ ಹೋದ ಮಗು ತನ್ನ ತಾಯಿಯೊಂದಿಗೆ ಏನೋ ಮಾತನಾಡಿ ನಿರಾಶೆಯಿಂದ ಹೊರಗೆ ಬಂತು. ತಾತ, 'ಏನಾಯಿತು?' ಎಂದು ಕೇಳಿದರು. 'ನಿನ್ನೆ ಅಮ್ಮ ಪಕ್ಕದ ಮನೆಯ ಆಂಟಿಯ ಹತ್ತಿರ ಮಾತನಾಡುವಾಗ, 'ಇವರ ತಾತ ಬೇಗ ಕಣ್ಣು ಮುಚ್ಚಿದರೆ ನಮಗೆ ಹಣ, ಆಸ್ತಿ ಏನಾದರೂ ಕೈಗೆ ಬರುತ್ತದೆ' ಅಂತ ಹೇಳುತಿದ್ದರು. ಅದಕ್ಕೆ ಕಣ್ಣು ಮುಚ್ಚಲು ಹೇಳಿದೆ. ಆಮೇಲೆ ಅಮ್ಮನ ಬಳಿ ಕೇಳಿದರೆ ಗದರಿಸಿ ಕಳಿಸಿದರು' ಎಂದು ಮಗು ಅಳತೊಡಗಿತು. ತಾತ ಮಾತನಾಡಲಿಲ್ಲ.



**ಶಿವಲೀಲಾ ಸೊಪ್ಪಿಮಠ**